ಓ.ಎಸ್.ನಂ.196-2020

ಪಿ.ಡಬ್ಲು-೧

ದಿ: 18.08.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

ಮುಖ್ಯ ವಿಚಾರಣೆ : ವಾದಿ ಪರವಾಗಿ ಶ್ರೀಯುತ ಎಂ.ಡಿ.ಬಿ. ವಕೀಲರಿಂದ.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿ: 24.06.1946 ರಂದು ಪಿಲ್ಲಗಾ ರವರು ತಾಯಪ್ಪ ಯಾನೆ ಮುನಿಶ್ಯಾಮಪ್ಪರವರಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.1 ಎಂದು, ದಿ: 06.10.1950 ರಂದು ತಾಯಪ್ಪರವರು ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.2 ಎಂದು, ದಿ: 02.02.1971 ರಂದು ತಿಮ್ಮಯ್ಯರವರಿಗೆ ಬರೆದುಕೊಟ್ಟ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.3 ಎಂದು, ದಿ: 01.04.1945 ರಿಂದ 31.03.1955 ನೇ ಸಾಲಿನವರೆಗಿನ ಸರ್ವೆ ನಂ.15 ಜಮೀನಿನ ನಮೂನೆ 15 ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ.4 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.